# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ991/2021

**ಪಿ.ಡಬ್ಲ್ಯೂಃ4 (ಸಿಡಬ್ಲ್ಯೂಃ10 )**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಆನಂದ್ ದಿಂಡೂರು |
| ತಂದೆಯ ಹೆಸರು | : | ಕರಿಬಸಪ್ಪ ದಿಂಡೂರು |
| ವಯಸ್ಸು | : | 38 ವರ್ಷ |
| ಕೆಲಸ | : | ಮೇಲ್ವಿಚಾರಕರು, ಜೆಸ್ಕಾಂ |
| ವಾಸ ಸ್ಥಳ | : | ಕುಡುತಿನಿ |

**ಸಾಕ್ಷಿಯನ್ನು ದಿನಾಂಕ 05.02.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ಈಗ 5 ವರ್ಷಗಳಿಂದ ಮೇಲ್ವಿಚಾರಕರಾಗಿ ಕುಡುತಿನಿ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿಯು ನಮ್ಮ ಇಲಾಖೆಯಲ್ಲಿ ಲೈನ್ ಮನ್ ಆಗಿ ಕೆಲಸ ಮಾಡುತ್ತಾನೆ. ಚಾಸಾ.11 ಸಂತೋಷ್ ಮೀಟರ್ ರೀಡರ್ ಆಗಿ ಕೆಲಸ ಮಾಡುತ್ತಾರೆ. ಚಾಸಾ.12 ಎಇಇ ಆಗಿ ಕೆಲಸ ಮಾಡುತ್ತಾರೆ. ಚಾಸಾ.14 ಷಾಬುದ್ದೀನ್ ಕಿರಿಯ ಅಭಿಯಂತರರು ಆಗಿ ಕೆಲಸ ಮಾಡುತ್ತಾರೆ.

**2.** ದಿಃ28.8.2019 ರಂದು ನಾನು ಗ್ರಾಮೀಣ ಉಪ ವಿಭಾಗ ಜೆಸ್ಕಾಂ ಬಳ್ಳಾರಿಗೆ ಮಃ3.00 ಗಂಟೆಗೆ ಬಂದಿದ್ದೇನೆ. ಎ.ಇ.ಇ ರವರು ನನಗೆ ಫೋನ್ ಮಾಡಿ ಬಳ್ಳಾರಿ ಕಚೇರಿಗೆ ಬರುವಂತೆ ಹೇಳಿದ್ದು ಅದರಂತೆ ನಾನು ಕಚೇರಿಗೆ ಹೋದಾಗ ಲೋಕಾಯುಕ್ತ ಪೊಲೀಸರು

ಇದ್ದರು. ಕಚೇರಿಯಲ್ಲಿ ಚಾಸಾ.12 ಅಶೋಕ್ ರೆಡ್ಡಿ , ಚಾಸಾ.11 ಸಂತೋಷ್ , ಆರೋಪಿ ಇದ್ದರು. ಆರೋಪಿ ಚಂದ್ರಪ್ಪ ಟ್ರ್ಯಾಪ್ ಆಗಿದ್ದಾರೆ ಮತ್ತು ಸಿಡಿಯಲ್ಲಿ ಇರುವ ಧ್ವನಿಯನ್ನು ಗುರುತು ಹಿಡಿಯುವಂತೆ ಹೇಳಿದರು. ಅದರಂತೆ ನಾನು ಸಿಡಿಯಲ್ಲಿ ಇದ್ದ ಧ್ವನಿ ಮುದ್ರಣವನ್ನು ಕೇಳಿ ಆರೋಪಿ ಚಂದ್ರಪ್ಪನ ಧ್ವನಿಯನ್ನು ಗುರುತಿಸಿದ್ದೇನೆ. ಆ ಕಾಲದಲ್ಲಿ ಬರೆದ ಪಂಚನಾಮೆಯನ್ನು ಗುರುತಿಸುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.4(ಸಿ)** ಎಂದು ಗುರುತಿಸಲಾಯಿತು. ನನ್ನ ಮುಂದೆ ಪ್ಲೇ ಮಾಡಿದ ಸಿಡಿಯನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ18 ಎಂದು ಗುರುತಿಸಲಾಗಿದೆ.

3. ದಿಃ29.8.2019 ರಂದು ನಾನು ಮತ್ತು ಅಶೋಕ ರೆಡ್ಡಿ ರವರು ಎ.ಸಿ.ಬಿ ಕಚೇರಿಗೆ ಬೆಃ9.00 ಗಂಟೆಗೆ ಹೋಗಿದ್ದೇವೆ. ಕಚೇರಿಯಲ್ಲಿ ಹಿರೇಮಠ ರವರು ಸಿಡಿಯನ್ನು ಲ್ಯಾಪಟಾಪ್ ಗೆ ಹಾಕಿ ಧ್ವನಿಯನ್ನು ಕೇಳಿಸಿದರು. ನಾನು ಮತ್ತು ಅಶೋಕ್ ರೆಡ್ಡಿ ರವರು ಸದರಿ ಧ್ವನಿಯು ಷಾಬುದ್ದೀನ್ ರವರದ್ದು ಎಂದು ಗುರುತುಹಿಡಿದಿದ್ದೇವೆ. ಆಗ ಬರೆದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು **ನಿಪಿ.33** ಎಂದು ಸಾಕ್ಷಿಯ ಸಹಿಯನ್ನು **ನಿಪಿ.33 ಎ** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋ ಗುರುತಿಸುತ್ತೇನೆ. ಅದನ್ನು **ನಿಪಿ.34** ಎಂದು ಗುರುತಿಸಲಾಯಿತು. ನನ್ನ ಎದುರಿಗೆ ಪ್ಲೇ ಮಾಡಿದ ಸಿಡಿಯನ್ನು ಗುರುತಿಸುತ್ತೇನೆ. ಸಿಡಿಯನ್ನು ಈಗಾಗಲೇ ನಿಪಿ.22 ಎಂದು ಗುರುತಿಸಲಾಗಿದೆ. ನಾನು ಎಸಿಬಿ ಅಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಶ್ರೀ ಯುಬಿ ಆರ್ಃ ವಕೀಲರು ಆರೋಪಿಯ ಪರಃ**

**4.** ನಾನು ಆಫೀಸ್ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತೇನೆ. ನಾನು ಆಫೀಸ್ ಎಸ್ಟಿಮೇಷನ್ ಮಾತ್ರ ಮಾಡುತ್ತೇನೆ. ಆರೋಪಿ ಲೈನ್ ಮನ್ ಆಗಿ ಕೆಲಸ ಮಾಡುತ್ತಾನೆ. ನನ್ನ

Spl.C.No.991/2021
P.W. 4 (C.W.10)
Date : 05.02.2025

ಮತ್ತು ಆರೋಪಿಯ ನಡುವೆ ಕರ್ತವ್ಯದ ವಿಷಯದಲ್ಲಿ ಬೇಟಿಯಾಗುವ ಅಗತ್ಯ ಕಂಡು ಬರುವುದಿಲ್ಲ. ಆರೋಪಿ ನನ್ನ ಕಚೇರಿಗೆ ಎಂದು ಸಹ ಬಂದಿಲ್ಲ ಎನ್ನುವುದು ಸರಿಯಲ್ಲ. ನಾನು ಆತನೊಂದಿಗೆ ಮಾತನಾಡಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಕಚೇರಿಗೆ ಬಹಳಷ್ಟು ಜನ ಬಂದು ಹೋಗುತ್ತಾರೆ. ಕಚೇರಿಗೆ ಬಂದು ಹೋಗುವವರ ಎಲ್ಲರ ಧ್ವನಿಯನ್ನು ನನಗೆ ಗುರುತಿಸಲು ಆಗುವುದಿಲ್ಲ.

5. ನಾನು ಗುರುತಿಸಿದ ಚಂದ್ರಪ್ಪನದು ಎನ್ನುವ ಬಗ್ಗೆ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎನ್ನುವುದು ಸರಿ . ಲೋಕಾಯುಕ್ತ ಪೊಲೀಸರು ನನಗೆ ಕೇಳಿಸಿದ ಧ್ವನಿ ಚಂದ್ರಪ್ಪ ಮತ್ತು ಷಾಬುದ್ದೀನ್ ರವರ ಧ್ವನಿ ಎಂದು ಹೇಳಿದ್ದರಿಂದ ನಾನು ಗುರುತಿಸಿದ್ದೇನೆ ಎಂದು ಹೇಳಿದ್ದೇನೆ ಎನ್ನುವುದು ಸರಿ . ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ಕೇಳಿದ ಸಿಡಿಗಳಲ್ಲಿ ಕೇಳಿದ ಧ್ವನಿ ಸರಿಯಾಗಿ ಕೇಳಿಸುತ್ತಿರಲಿಲ್ಲ ಎನ್ನುವುದು ಸರಿ.

**ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**